ಶ್ರೀ ಸಿದ್ದರಾಮಯ್ಯ : Please, ನಾಳೆ ಮಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಸರ್, ಇದು ವಿಧಾನ ಪರಿಷತ್ತಿಗೆ ಬೇರೆ ಹೋಗಬೇಕು.

ಶ್ರೀ ಸಿದ್ದರಾಮಯ್ಯ : ಪರವಾಗಿಲ್ಲ, ನಾಳೆ ಬೆಳಗ್ಗೆಯೇ ಮಾಡಿಕೊಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ದಯವಿಟ್ಟು ಹೀಗೆ ಮಾಡಿ, ನಾಳೆ Assembly ಆರಂಭವಾಗುತ್ತಿದ್ದಂತೆ first ಮಾಡಿ. ಆನಂತರ ಬೇರೆ ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಾಳೆ Question Hour ಆದ ಮೇಲೆ ಮಾಡೋಣ, ಮಾನ್ಯ ಅಧ್ಯಕ್ಷರೆ.

ಶ್ರೀ ಕೆ.ಎಸ್. ಈಶ್ವರಪ್ಪ : Question Hourಗೆ ಮೊದಲು ಮಾಡಿ, ಸರ್.

ಅಧ್ಯಕ್ಷರು : ನಾಳೆ Question Hour ಇಲ್ಲ.

ಶ್ರೀ ಸಿದ್ದರಾಮಯ್ಯ : Question Hour ಇಲ್ಲವೇ? ಆಯಿತು. ಹಾಗಾದರೆ ನಾಳೆ ಮಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : First ಇದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ.

ಶ್ರೀ ಕೆ.ಎಸ್. ಈಶ್ವರಪ್ಪ : Thank you.

ಶ್ರೀ ಸಿದ್ದರಾಮಯ್ಯ : ಇದಕ್ಕೆಲ್ಲ ಅವಕಾಶ ಮಾಡಿ ಕೊಡಿ. ನೀವು ಉತ್ತರ ಕರ್ನಾಟಕದ್ದೇ ಚರ್ಚೆ ಮಾಡುವುದನ್ನು ಬಿಟ್ಟುಬಿಡುತ್ತೀರಲ್ಲ? ನಿನ್ನೆ ಅವರು ಉತ್ತರ ಕೊಟ್ಟಿಲ್ಲ. ಎಲ್ಲಿ ಕೊಟ್ಟರು?

ಅಧ್ಯಕ್ಷರು : ಎಲ್ಲವನ್ನೂ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಇನ್ನೂ incomplete discussion. ಮಾಡಬೇಕೋ ಬೇಡವೋ? ಒಂದು issue ವನ್ನಾದರೂ ಚರ್ಚೆ ಮಾಡದೇ

ಇದ್ದರೆ ಹೇಗೆ? ನಂಜುಂಡಪ್ಪನವರ ವರದಿ ಬೇರೆ ಇದೆ. ಅದರ ಬಗ್ಗೆ ಮಾತನಾಡಬೇಕು. ಏನೂ ಆಕಾಶ ಬಿದ್ದು ಹೋಗುವುದಿಲ್ಲ. ಇದನ್ನು ಕೊಡಿ.

ಅಧ್ಯಕ್ಷರು : ಎಲ್ಲವನ್ನೂ ನಾಳೆ ಕೊಡುತ್ತೇನೆ. Whole day ಮಾಡೋಣ. ಇನ್ನೊಂದು ಎರಡು ಮೂರು ಬಿಲ್ ಇವೆ.

ಶ್ರೀ ಎಸ್. ಸುರೇಶ್ ಕುಮಾರ್ : ನಾಳೆ Question Hour ಇಲ್ಲ. ಅದರ ಬಗ್ಗೆ ಉತ್ತರವನ್ನೂ ಕೊಡುತ್ತೇವೆ. ಈ ಬಿಲ್‌ಗಳೆಲ್ಲ ಕೌನ್ಸಿಲ್‌ಗೆ ಹೋಗಬೇಕು. ಅದಕ್ಕೋಸ್ಕರ ಈ ಬಿಲ್‌ಗಳು ಮುಗಿಯಲಿ, ನಾಳೆ ಬೆಳಗ್ಗೆ ಉತ್ತರ ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : ಒಂದೇ ಸಲ 20 ಬಿಲ್‌ಗಳನ್ನು ತೆಗೆದುಕೊಂಡು ಬಂದರೆ ಹೇಗೆ? ಅಸೆಂಬ್ಲಿಯನ್ನು ಕೇವಲ 5–6 ದಿವಸ ನಡೆಸುತ್ತೀರಿ. ಈ ಅವಧಿಯಲ್ಲಿ 20 ಬಿಲ್‌ಗಳನ್ನು ತೆಗೆದುಕೊಂಡು ಬರುತ್ತೀರಿ.

ಶ್ರೀ ಎಸ್. ಸುರೇಶ್ ಕುಮಾರ್ : ಪ್ರತಿದಿವಸ ಒಂದು adjournment motion ಬರುತ್ತಿದೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ adjournment motion ಬೇಡವೆ?

ಶ್ರೀ ಎಸ್. ಸುರೇಶ್ ಕುಮಾರ್ : ಖಂಡಿತ ಬರಬೇಕು. ಆದರೆ, adjournment motion ನ್ನೇ ಬರಬೇಕು.

ಶ್ರೀ ಸಿದ್ದರಾಮಯ್ಯ : ಅದಕ್ಕೆ ಸದನವನ್ನು 20 ದಿವಸ ನಡೆಸಿ.

ಶ್ರೀ ಎಸ್. ಸುರೇಶ್ ಕುಮಾರ್ : ಬೇರೆ ಬೇರೆ motionಗಳನ್ನು urgent ಮಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ : ಬೇರೆ ಮೋಷನ್‌ಗಳನ್ನು ನೀವೇ ಇಟ್ಟುಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್ : ಕೃಷ್ಣಾ ನದಿ ನೀರಿನ ಬಗ್ಗೆ ನಾಳೆ ಉತ್ತರ ಕೊಡಿಸುತ್ತೇವೆ. ಈಗ ಬಿಲ್ ಪಾಸ್ ಮಾಡಿಕೊಡಿ. ಏಕೆಂದರೆ, ಮತ್ತೆ ಬಿಲ್ ಕೌನ್ಸಿಲ್‌ಗೆ ಹೋಗಬೇಕಾಗಿದೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಇನ್ನೊಂದು ದಿವಸ ಸದನ ನಡೆಸಿ. ಅಂದರೆ 14ನೇ ತಾರೀಖು ಸದನ ನಡೆಸಿ. ಇಲ್ಲಿ ಮಾಡುವುದಿಲ್ಲವೆಂದರೆ 400

ಕೋಟಿ ಖರ್ಚು ಮಾಡಿ ಈ ವಿಧಾನ ಸೌಧ ಕಟ್ಟಡವನ್ನು ಏತಕ್ಕೆ ಕಟ್ಟಿದರು? 400 ಕೋಟಿ ರೂಪಾಯಿಯಲ್ಲಿ 100 ಕೋಟಿ ಹೊಡೆದಿದ್ದಾರೆಂದು ಜನರು ಮಾತನಾಡುತ್ತಿದ್ದಾರೆ.

ಶ್ರೀ ಕೃಷ್ಣ ಬೈರೇಗೌಡ : ಸದನವನ್ನು ವರ್ಷದಲ್ಲಿ 60 ದಿವಸ ನಡೆಸಬೇಕೆಂದು ನಾವೇ ರೂಲ್ಸ್ ಮಾಡಿಕೊಂಡಿದ್ದೇವೆ. ಆದ್ದರಿಂದ, 60 ದಿವಸ ಸದನ ನಡೆಸಿದರೆ ಎಲ್ಲ ಬಿಲ್‌ಗಳ ಪಾಸ್ ಆಗುತ್ತವೆ. ಹಾಗೆಯೇ ಎಲ್ಲ ವಿಷಯಗಳ ಬಗ್ಗೆ ಚರ್ಚೆ ಆಗುವುದಕ್ಕೆ ಅವಕಾಶ ಸಿಗುತ್ತದೆ. 60ದಿವಸ ಸದನವನ್ನು ನಡೆಸುವುದಕ್ಕೆ ನೀವು ತಯಾರಿಲ್ಲ. ದಯವಿಟ್ಟು 60 ದಿವಸ ಸದನ ನಡೆಸಿ.

ಅಧ್ಯಕ್ಷರು : ಆಯಿತು. ಈಗ ಎರಡು ಬಿಲ್ ಇದೆ. ಅದನ್ನು ತೆಗೆದುಕೊಂಡು ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಗೋವಧೆಗೆ ಸಂಬಂಧಪಟ್ಟ ಬಿಲ್ ತೆಗೆದುಕೊಂಡರೆ ನಾವು ಧರಣಿಗೆ ಹೋಗುತ್ತೇವೆ.

ಶ್ರೀ ರೇವುನಾಯಕ್ ಬೆಳಮಗಿ : ನನ್ನ ಬಿಲ್ ಅನ್ನು ತಾವು ಏಕೆ ಬೇಡವೆಂದು ಹೇಳುತ್ತೀರಿ?

ಶ್ರೀ ಸಿದ್ದರಾಮಯ್ಯ : ಅದು ಆಗುವುದಿಲ್ಲ. No, it is anti-people. ಅದನ್ನು ಒಪ್ಪುವುದಿಲ್ಲ.

ಶ್ರೀ ರೇವುನಾಯಕ್ ಬೆಳಮಗಿ : ಗೋಮಾತೆ ಈ ದೇಶದ ಸಂಪತ್ತು.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ವಿರೋಧ ಪಕ್ಷದ ನಾಯಕರೆ, ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಬಿಲ್ ಕಳೆದ ಸಾರಿ ಬಂದಾಗ ಮುಂದಿನ ಸಾರಿ ತೆಗೆದುಕೊಳ್ಳೋಣವೆಂದು ತಾವು ಮುಂದಕ್ಕೆ ಹಾಕಿಸಿದ್ದೀರಿ.

ಶ್ರೀ ಸಿದ್ದರಾಮಯ್ಯ : ಈಗ ಬೇರೆ ಯಾವುದಾದರೂ ಬಿಲ್‌ಗಳನ್ನು ತೆಗೆದುಕೊಂಡು ಬನ್ನಿ.

ಅಧ್ಯಕ್ಷರು : ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ(ನಿಯಂತ್ರಣ) ಪ್ರಾಧಿಕಾರ ವಿಧೇಯಕ, 2012 ಬಿಲ್ ಅನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ವಿರೋಧಪಕ್ಷದ ನಾಯಕರೆ, ಉಳಿದ ಬಿಲ್‌ನ್ನು ತೆಗೆದುಕೊಳ್ಳಿ ಎಂದು ಹೇಳುತ್ತೀರಿ. ಆದರೆ, ನಗರ ಪ್ರದೇಶದ ಬಿಲ್ ಅನ್ನು ಏಕೆ ಬೇಡವೆಂದು ಹೇಳಿದ್ದೀರಿ?

ಶ್ರೀ ಸಿದ್ದರಾಮಯ್ಯ : ಆ ಬಿಲ್ ಅನ್ನು ಓದಿಲ್ಲ. ಆದ್ದರಿಂದ, ನಾಳೆ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅದೇ ರೀತಿಯಾಗಿಯೇ ಈ ಬಿಲ್ ಸಹ ಇದೆ. ಅದರಲ್ಲಿ ಬೇರೇನೂ ಇಲ್ಲ.

ಶ್ರೀ ಸಿದ್ದರಾಮಯ್ಯ : ಬಿಲ್ ಅನ್ನು ಓದಬೇಕು. ಮತ್ತೆ ಸಿಟಿ ಎಂಎಲ್‌ಎ ಜೊತೆ ಮಾತನಾಡಿಕೊಂಡು ಬರುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಮಾಡಿಕೊಡುವುದಿಲ್ಲವೆಂದು ನಾನು ಹೇಳುತ್ತಿಲ್ಲ. ನೀವು ಖಂಡಿತ ಮಾಡಿಕೊಡುತ್ತೀರಿ.

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ : ರಾಜ್ಯದಲ್ಲಿ ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡಿರುವ ಎಷ್ಟು ಪ್ರಕರಣಗಳಿವೆ ಎಂಬ ಮಾಹಿತಿ ಬೇಕಲ್ಲವೇ? ಈ ಮಾಹಿತಿ ಇಲ್ಲದೆ ಕೇವಲ ಬಿಲ್ ಮೂವ್ ಮಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ : ಈ ಬಗ್ಗೆ ಒಂದು ಸರ್ವೆಯಾದರೂ ಮಾಡಿಸಿದ್ದೀರಾ?

ಶ್ರೀ ಕೆ.ಎಸ್. ಈಶ್ವರಪ್ಪ : ಇದರ ಬಗ್ಗೆ ಚರ್ಚೆ ಮಾಡೋಣ. ನಾನು ಬೇಡವೆಂದು ಹೇಳುವುದಿಲ್ಲ. ಆದರೆ, ಈಗ ಈ ಒಂದು ಬಿಲ್ ಪಾಸ್ ಮಾಡಿ ಕೊಡಿ. ಏಕೆಂದರೆ, ಇದರಿಂದ ಬಡವರಿಗೆ ಖಂಡಿತ ಲಾಭವಾಗುತ್ತದೆ. ಇಲ್ಲವೆಂದರೆ ಮತ್ತೆ ಯಾವಾಗಲೋ ಆಗುತ್ತದೆ. ನಾಳೆ ಒಂದೇ ದಿವಸ ಸದನ ನಡೆಸುವುದಕ್ಕೆ ಸಮಯ ಉಳಿದಿದೆ. ಆದ್ದರಿಂದ, ಈಗ ಅವಕಾಶ ಕೊಟ್ಟರೆ ಮಾಡಬಹುದು.

ಶ್ರೀ ಸಿದ್ದರಾಮಯ್ಯ : ನಾಳೆ ದಿವಸ ಮಾಡೋಣ ಎಂದು ಹೇಳಿದ್ದೇವೆ.

3. ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ವಿಧೇಯಕ, 2012

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2012ರ ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ಕರ್ನಾಟಕ ರಾಜ್ಯದಲ್ಲಿ ಒಂದು ನರ್ಸಿಂಗ್ ಬೋರ್ಡ್ 1991ರಲ್ಲಿ ಸ್ಥಾಪನೆ ಆಯಿತು. ಪ್ಯಾರಾ ಮೆಡಿಕಲ್ ಬಿಲ್ 1997ರಲ್ಲಿ ಸ್ಥಾಪನೆ ಆಯಿತು. ಆದರೆ, ಈ ಒಂದು ಅಥಾರಿಟಿಯನ್ನು constitute ಮಾಡುವುದಕ್ಕೆ ಹೊರಟಿದ್ದೀವೆ. ಏಕೋ ಗೊತ್ತಿಲ್ಲ, ಹಿಂದಿನ ಯಾವುದೇ ಸರ್ಕಾರ ಬಂದಾಗಲೂ ಸಹ ಈ ಎರಡು ಬೋರ್ಡ್‌ಗಳನ್ನು ಇವತ್ತಿನವರೆಗೆ ರಿಜಿಸ್ಟ್ರೇಷನ್ ಮಾಡುವುದಕ್ಕೆ ಹೋಗಿಲ್ಲ. ರಿಜಿಸ್ಟ್ರೇಷನ್ ಆಗದೆ ಕೈತಪ್ಪಿ ಹೋಗಿರುವಂಥ ವ್ಯವಸ್ಥೆಗಳಾಗಿವೆ. ಈ ದೃಷ್ಟಿಯಲ್ಲಿ ನಮ್ಮ ಸದನದ ಭಾವನೆ ಯನ್ನು ಅರ್ಥ ಮಾಡಿಕೊಂಡು ನಿನ್ನೆ ದಿವಸ ಒಂದು ವಿಧೇಯಕವನ್ನು ಮಂಡನೆ ಮಾಡಿದ್ದೆ, ಆ ವಿಧೇಯಕದ ಜೊತೆಯಲ್ಲಿ ಒಂದು ಅಮೆಂಡ್ ಮೆಂಟ್ ಅನ್ನು ಸಹ ಮೂವ್ ಮಾಡಿದ್ದೇನೆ. ಅದನ್ನೂ ಕೂಡ ಈಗ ಮಂಡನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಮ್ಮಲ್ಲಿ ಕೋರುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ನಾಲ್ಕು ಅಂಶಗಳ ಅಮೆಂಡ್ ಮೆಂಟ್‌ನ ಮಾಹಿತಿಯನ್ನೂ ಸಹ ಇಲ್ಲಿ ಕೊಟ್ಟಿದ್ದೇನೆ. ಆ ಅಮೆಂಡ್‌ಮೆಂಟ್‌ನ